## ಅನುಬಂಧ

ತುಂಗಾ ಮೇಲ್ದಂಡೆ ಯೋಜನೆಯಾಗಿ ಮುಳುಗಡೆ ಆಗುವ ಖಾಸಗಿ ಮತ್ತು ಸರ್ಕಾರಿ ಆಸ್ತಿಯ ವಿವರಗಳು:

| ಕ್ರ. ಸಂ. | ವಿಷಯ | ಖಾಸಗಿ | ಸರ್ಕಾರಿ | ಒಟ್ಟು |
|---|---|---|---|---|
| 1. | ಮುಳುಗಡೆ ಆಗುವ ಪ್ರದೇಶ (ಎಕರೆಗಳಲ್ಲಿ) | 194.00 | 47.00 | 241.00 |
| 2. | ಇದರ ಅಂದಾಜು (ಲಕ್ಷ ರೂ.ಗಳಲ್ಲಿ) | 54.30 | 4.48 | 58.78 |
| 3. | ಕಟ್ಟಡಗಳು, ಇತರೆ | 163.00 | 10.00 | 173.00 |
| 4. | ಇದರ ಅಂದಾಜು | 117.82 | 105.17 | 222.99 |
| 5. | ಮುಳುಗಡೆ ಆಗುವ ಪ್ರದೇಶ ಕಟ್ಟಡಗಳ ಒಟ್ಟು ಅಂದಾಜು (ಲಕ್ಷ ರೂ.ಗಳಲ್ಲಿ) | 172.12 | 109.65 | 281.77 |

## ಕರ್ನಾಟಕ ಮಹಾರಾಷ್ಟ್ರ ಗಡಿವಿವಾದದ ಬಗ್ಗೆ

**48 (28)** ಶ್ರೀ ಡಿ.ಬಿ. ಚಂದ್ರೇಗೌಡ (ತೀರ್ಥಹಳ್ಳಿ)

ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಇತ್ತೀಚೆಗೆ ಕೇಂದ್ರದ ಗೃಹಸಚಿವರು ಕರ್ನಾಟಕ ಮತ್ತು ಮಹಾರಾಷ್ಟ್ರ ಗಡಿ ಸಮಸ್ಯೆ ಬಗ್ಗೆ ಗೋವಾದಿಂದ ಮಾಡಿದ ಹೇಳಿಕೆ ಸರ್ಕಾರದವರ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಇದರ ಬಗ್ಗೆ ಸರ್ಕಾರದವರು ಕೈಗೊಂಡಿರುವ ಕ್ರಮವೇನು;

ಶ್ರೀ ಎಂ. ವೀರಪ್ಪಮೊಯಿಲಿ (ಮುಖ್ಯ ಮಂತ್ರಿಯವರು):–

ಅ) ಹೌದು

ಆ) ಯಾವುದೇ ಕ್ರಮದ ಅಗತ್ಯವಿಲ್ಲ

## ಕರ್ನಾಟಕ ರಾಜ್ಯದ ಆರ್ಥಿಕ ಪರಿಸ್ಥಿತಿ.

**49 (29)** ಶ್ರೀ ಡಿ.ಬಿ. ಚಂದ್ರೇಗೌಡ (ತೀರ್ಥಹಳ್ಳಿ)

ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಕರ್ನಾಟಕ ರಾಜ್ಯ ಸರ್ಕಾರದ ಇಂದಿನ ಆರ್ಥಿಕ ಪರಿಸ್ಥಿತಿ ಏನು;

ಆ) ರಾಜ್ಯ ಸರ್ಕಾರದ ಆರ್ಥಿಕ ಪರಿಸ್ಥಿತಿಯನ್ನು ಪ್ರತಿಬಿಂಬಿಸುವ ಶ್ವೇತಪತ್ರವನ್ನು ಹೊರಡಿಸಲು ಸರ್ಕಾರ ಉದ್ದೇಶಿಸಿದೆಯೆ;

ಇ) ಹಾಗಿಲ್ಲದಿದ್ದಲ್ಲಿ ಅದಕ್ಕೆ ಕಾರಣಗಳೇನು;

ಈ) 1992–93ನೇ ಸಾಲಿನಲ್ಲಿ 1992ರ ನವೆಂಬರ್ 30ನೇ ದಿನಾಂಕಕ್ಕೆ ಸರ್ಕಾರದ ವಿವಿಧ ಮೂಲಗಳಿಂದ ಬಂದ ಒಟ್ಟು ಆದಾಯವೆಷ್ಟು ?